ಓ ಎಸ್ ನಂ. 242/2022

ಪಿ ಡಬ್ಲ್ಯು 1

ದಿನಾಂಕ 05-11-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಗಳ ಪರಃ ಶ್ರೀ ಎಸ್ ಎನ್ ಎ ವಕೀಲರಿಂದಃ

ನಾನು ಡಿಪ್ಲೋಮಾ ಇನ್ ಇಂಜಿನೀಯರಿಂಗ್ ವ್ಯಾಸಂಗ ಮಾಡಿರುತ್ತೇನೆ. ನಿಪಿ-1 ರ ವಂಶವೃಕ್ಷಕ್ಕೆ ನಾನು ಖುದ್ದಾಗಿ ಮಾಹಿತಿ ನೀಡಿರುತ್ತೇನೆ. ನನ್ನ ಅಜ್ಜ ಮರುಳಪ್ಪರವರ ಕುಟುಂಬದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ನನ್ನ ಚಿಕ್ಕಪ್ಪ ಗೋವಿಂದಪ್ಪನಿಗೆ ಇಬ್ಬರು ಹೆಂಡತಿಯರು. ಅವರ ಮೊದಲನೇ ಹೆಂಡತಿ ಹೆಸರು ಗೌರಮ್ಮ ಮತ್ತು ಎರಡನೇ ಹೆಂಡತಿ ಹೆಸರು ಶಿವಮ್ಮ. ಸದರಿ ಗೌರಮ್ಮರವರಿಗೆ ಒಟ್ಟು 6 ಜನ ಮಕ್ಕಳು ಇದ್ದಾರೆ. ಅವರೆಂದರೆ 1. ಭಾಗ್ಯ 2. ಗಾಯಿತ್ರಿ 3. ಚಂದ್ರಮ್ಮ 4. ಮಂಜಮ್ಮ 5. ಪದ್ಮಾವತಿ 6. ದಯಾನಂದ್. ಶಿವಮ್ಮರವರಿಗೆ ಪವಿತ್ರ ಎಂಬ ಒಬ್ಬಳೆ ಮಗಳು ಇದ್ದಾರೆ. ನಿಪಿ-1 ರ ವಂಶವೃಕ್ಷಕ್ಕೆ ಸಾಕ್ಷಿದಾರರ ಸಹಿ ಇಲ್ಲ ಎಂದರೆ ಸರಿ. ನಿಪಿ-1 ರ ವಂಶವೃಕ್ಷದಲ್ಲಿ ಗೌರಮ್ಮರವರ ಮಕ್ಕಳು ಮತ್ತು ಶಿವಮ್ಮರವರ ಮಗಳನ್ನು ಕಾಣಿಸಲು ತೊಂದರೆ ಇತ್ತ ಎಂದರೆ ಸಾಕ್ಷಿ ಮೌಖಿಕ ವಿಭಾಗ ಪತ್ರ ಆಗಿದೆ ಎಂದು ನನ್ನ ಭಾವನೆ ಇದ್ದು ನನ್ನ ತಂದೆಯ ಹಿಸ್ಸೆಗೆ ಮಾತ್ರ ಅವಶ್ಯಕ ಇರುವವರ ಹೆಸರನ್ನು ಮಾತ್ರ ನಿಪಿ-1 ರ ದಾಖಲೆಯಲ್ಲಿ ತೋರಿಸಲಾಗಿದೆ ಎಂದು ನುಡಿದಿರುತ್ತಾರೆ. ಮೌಖಿಕ ವಿಭಾಗ ಪತ್ರವಾಗಿದೆ ಎನ್ನುವ ವಿಚಾರವನ್ನು ಮತ್ತು ಮೇಲ್ಕಂಡವರನ್ನು ಉದ್ದೇಶಪೂರ್ವಕವಾಗಿ ಬಿಟ್ಟಿರುವ ವಿಚಾರವನ್ನು ನನ್ನ ವಾದಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತೇನಾ ಎಂದರೆ ಸಾಕ್ಷಿ ನನ್ನ ವಕೀಲರ ನಿರ್ದೇಶನದಂತೆ ವಾದಪತ್ರದ ವಿಚಾರಗಳನ್ನು ತಿಳಿಸಿರುತ್ತೇನೆ ಆದರೆ ಯಾವುದೇ ದುರುದ್ದೇಶ ಹೊಂದಿಲ್ಲ ಎಂದು ನುಡಿದಿರುತ್ತಾರೆ. ಮೇಲೆ ಹೇಳಿದಂತೆ

ಗೌರಮ್ಮರವರ ಮಕ್ಕಳು ಮತ್ತು ಶಿವಮ್ಮರವರ ಮಗಳು ಮರುಳಪ್ಪರವರ ಒಟ್ಟು ಕುಟುಂಬದ ಸದಸ್ಯರು ಎಂದರೆ ಸರಿ. ಅವರು ಎಲ್ಲಿದ್ದಾರೆ ಎಂಬ ಬಗ್ಗೆ ವಿಳಾಸ ಗೊತ್ತಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

2. ನನ್ನ ತಂದೆ ವೀರಭದ್ರಪ್ಪರವರು ಪಿ ಯುಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ನನ್ನ ಚಿಕ್ಕಪ್ಪ ಗೋವಿಂದಪ್ಪರವರು ಡಿಗ್ರಿ ವ್ಯಾಸಂಗ ಮಾಡಿದ್ದರೆ. ನನ್ನ ತಂದೆ ಮತ್ತು ಚಿಕ್ಕಪ್ಪರವರ ಸಹಿಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ನನ್ನ ತಂದೆ ಮತ್ತು ಚಿಕ್ಕಪ್ಪನವರು ದಿನಾಂಕ 06/02/2002 ರಂದು ನನ್ನ ತಂದೆ ಅವರ ಹಿಸ್ಸೆಗೆ ಬಂದತಂಹ 1 ಎಕರೆ 7 ಗುಂಟೆ ಪೈಕಿ 23½ ಗುಂಟೆ ಜಮೀನನ್ನು ನನ್ನ ಸಹೋದರ 4 ನೇ ಪ್ರತಿವಾದಿಯಾದ ದೇವರಾಜುರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪತ್ರವನ್ನು ನಾನು ನೋಡಿರುವುದಿಲ್ಲ. ಪಹಣಿಯನ್ನು ನೋಡಿದಾಗಲೇ ಸದರಿ ಮಾರಾಟದ ವಿಚಾರ ನನಗೆ ತಿಳಿದುಬಂದಿರುತ್ತದೆ. ಪಹಣಿಯನ್ನು ಈ ದಾವೆಯನ್ನು ಹೂಡುವ ಮೊದಲು 2021 ರಲ್ಲಿ ನೋಡಿರುತ್ತೇನೆ. ನನ್ನ ತಂದೆ ಮತ್ತು ಚಿಕ್ಕಪ್ಪರವರು ಸೇರಿ ದಿನಾಂಕ 25/02/1999 ಸರ್ವೆ ನಂ.117/7 ಪಿರಲ್ಲಿ 20 ಗುಂಟೆ ಜಮೀನನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಪ್ರಸ್ತುತ ದಾವೆಯನ್ನು ಯಾವ ಪರಿಹಾರಕ್ಕಾಗಿ ಹೂಡಲಾಗಿದೆ ಎಂಬ ವಿಚಾರವನ್ನು ನನ್ನ ವಕೀಲರ ಮೂಲಕ ನಾನು ತಿಳಿದುಕೊಂಡಿರುತ್ತೇನೆ. ಪ್ರಸ್ತುತ ದಾವೆಯಲ್ಲಿ ದಿನಾಂಕ 06/02/2002 ಮತ್ತು 25/02/1999 ರ ಕ್ರಯಪತ್ರಗಳು ಅನ್ವಯವಾಗುವುದಿಲ್ಲ ಎಂಬುದಾಗಿ ಪರಿಹಾರವನ್ನು ಕೇಳಿರುತ್ತೇನಾ ಎಂದರೆ ಸಾಕ್ಷಿ ಸದರಿ ಸ್ವತ್ತುಗಳಲ್ಲೂ ಸಹ ನನಗೆ ಭಾಗ ಬರಬೇಕು ಎಂಬುದಾಗಿ ನಾನು ಕೇಳಿರುತ್ತೇನೆ ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದಲ್ಲಿದ್ದಾಗ ಸದರಿ ಸ್ವತ್ತುಗಳನ್ನು ಕೊಂಡುಕೊಳ್ಳಲಾಗಿದೆ ಎಂದು ನುಡಿದಿರುತ್ತಾರೆ. ಮೇಲ್ಕಂಡ ಕ್ರಯಪತ್ರಗಳ ಆಧಾರದಲ್ಲಿ 4 ನೇ ಪ್ರತಿವಾದಿ ಹೆಸರಿಗೆ ಖಾತೆ ಮತ್ತು ಪಹಣಿ

ಬಂದಿದ್ದು ಬ್ಯಾಂಕಿನಲ್ಲಿ ಸಾಲ ಸಹ ಪಡೆದಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

3. ದಾವಾ ಸ್ವತ್ತುಗಳ ಸರ್ವೆ ನಂಬರು ಮತ್ತು ವಿಸ್ತೀರ್ಣಗಳು ನನಗೆ ತಿಳಿದಿದೆ. ಪಂಚನಹಳ್ಳಿ ಗ್ರಾಮದ ಸರ್ವೆ ನಂ.3/2 ಪಿ3, 178/8, 178/10, 195/6 ಎ, 195/6 ಬಿ ಸ್ವತ್ತುಗಳ ನನ್ನ ಚಿಕ್ಕಪ್ಪನಾದ ಗೋವಿಂದಪ್ಪನವರ ಹೆಸರಿನಲ್ಲಿದ್ದವು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಗೋವಿಂದಪ್ಪನವರಿಗೆ ಮೇಲ್ಕಂಡ ಆಸ್ತಿಗಳು ಹೇಗೆ ಬಂತು ಎಂದು ತಿಳಿದಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಮೇಲ್ಕಂಡ ಸ್ವರ್ವೆ ನಂಬರುಗಳ ಆಸ್ತಿಗಳು ಸಹ ಮರುಳಪ್ಪನವರ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. ಸದರಿ ಸ್ವತ್ತುಗಳನ್ನು ದಾವೆಯಲ್ಲಿ ಕಾಣಿಸಿಲ್ಲ ಎಂದರೆ ಸರಿ. ದಾವಾ ಐಟಂ ನಂ.10 ರಿಂದ 14ರ ಆಸ್ತಿಗಳು ಮರುಳಪ್ಪನವರ ಹೆಸರಿನಲ್ಲಿದ್ದವು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿದು, ಸದರಿ ಸ್ವತ್ತುಗಳು ನನ್ನ ತಂದೆಯ ಹೆಸರಿನಲ್ಲಿ ಇರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ ಎಂದು ನುಡಿದಿರುತ್ತಾರೆ. ದಾವಾ ಐಟಂ ನಂ.10 ರಿಂದ 14ರ ಆಸ್ತಿಗಳು 3 ಮತ್ತು 4ನೇ ಪ್ರತಿವಾದಿಗಳ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಐಟಂ ನಂ.9ರ ಆಸ್ತಿ 4ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಈಗಾಗಲೇ ಸುಮಾರು 55 ವರ್ಷಗಳ ಹಿಂದೆಯೇ ವಿಭಾಗವಾಗಿದ್ದರೂ ಸಹ 4ನೇ ಪ್ರತಿವಾದಿ ಕೊಂಡಿರುವ ಸ್ವತ್ತುಗಳ ಮೇಲೆ ವಿನಃ ಕಾರಣ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

4. ನನ್ನ ತಂದೆ ಬದುಕಿದ್ದಾಗಲೇ ಎಲ್ಲಾರೂ ಪ್ರತ್ಯೇಕವಾಗಿ ವಾಸ ಮಾಡಿಕೊಂಡಿದ್ದು, ಆಗಲೇ ವಿಭಾಗವಾಗಿದ್ದರೂ ಸಹ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸಾಕ್ಷಿ ಪ್ರತ್ಯೇಕವಾಗಿ ವಾಸ ಇರುವುದು ನಿಜ ಆದರೆ ವಿಭಾಗ ಆಗಿಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆ ಸುಮಾರು 5 ವರ್ಷಗಳ

ಹಿಂದೆ ಮರಣ ಹೊಂದಿರುತ್ತಾರೆ. ನನ್ನ ತಂದೆ ಬದುಕಿರುವಾಗಲೇ ನನ್ನ ಮತ್ತು ನನ್ನ ಸಹೋದರ ಮತ್ತು ಸಹೋದರಿಯರ ಹೆಸರಿನಲ್ಲಿ ಪ್ರತ್ಯೇಕ ಕುಟುಂಬ ಪಡಿತರ ಚೀಟಿಗಳು ಆಗಿರುತ್ತವೆ ಎಂದರ ಸಾಕ್ಷಿ 4 ನೇ ಪ್ರತಿವಾದಿ ಮಾತ್ರ ಪ್ರತ್ಯೇಕ ಪಡಿತರ ಚೀಟಿ ಹೊಂದಿರುತ್ತಾರೆ ಎಂದು ನುಡಿದಿರುತ್ತಾರೆ. 4 ನೇ ಪ್ರತಿವಾದಿಯವರ ಆದಾಯದಿಂದ ದಾವಾ ಐಟಂ ನಂ.2 ಮತ್ತು 4 ರ ಆಸ್ತಿಗಳನ್ನು ನನ್ನ ಚಿಕ್ಕಪ್ಪ ಗೋವಿಂದಪ್ಪರವರಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪ ಮೋಸದಿಂದ ನನಗೆ ಯಾವುದೇ ಆಸ್ತಿಗಳನ್ನು ಕೊಡದೆ 4 ನೇ ಪ್ರತಿವಾದಿಗೆ ಮಾತ್ರ ಆಸ್ತಿಗಳನ್ನು ಕೊಟ್ಟಿರುತ್ತಾರೆ ಎಂಬುದಾಗಿ ಯಾವುದಾದರೂ ದೂರನ್ನು ನೀಡಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿದಿರುತ್ತಾರೆ. ಸುಮಾರು 55 ವರ್ಷಗಳ ಹಿಂದೆಯೇ ನನ್ನ ತಂದೆ ಮತ್ತು ಚಿಕ್ಕಪ್ಪ ಜುಬಾನೆ ಪಾಲು ವಿಭಾಗ ಮಾಡಿ ನನ್ನ ಮತ್ತು 4 ನೇ ಪ್ರತಿವಾದಿಗಳ ಹಿಸ್ಸೆಗೆ ಸ್ವತ್ತುಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ ಕಾಲಕ್ಕೆ ಯಾವುದೇ ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.7 ರಿಂದ 9 ರ ಆಸ್ತಿಗಳು ಸಹ 4 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ.

5. ನನ್ನ ತಂದೆ ಬದುಕಿದ್ದಾಗ ಅವರ ಯೋಗಕ್ಷೇಮವನ್ನು 4 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ 4 ನೇ ಪ್ರತಿವಾದಿಗಿಂತ ನಾನೇ ಚೆನ್ನಾಗಿ ನೋಡಿಕೊಂಡಿದ್ದೇನೆ, ಆ ಬಗ್ಗೆ ದಾಖಲೆಗಳು ನನ್ನ ಬಳಿ ಇವೆ ಎಂದು ನುಡಿದಿರುತ್ತಾರೆ. ಸದರಿ ದಾಖಲಾತಿಗಳನ್ನು ಇದುವರೆಗೂ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇದ್ದಾಗ ಹಾಜರುಪಡಿಸುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ತಂದೆಯನ್ನು 4 ನೇ ಪ್ರತಿವಾದಿ ಮಾತ್ರ ನೋಡಿಕೊಂಡಿದ್ದರು ಸಹ ನಾನು ನೋಡಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ನನ್ನ

ತಂದೆಯನ್ನು ಚೆನ್ನಾಗಿ ನೋಡಿಕೊಂಡಿದ್ದ ಕಾರಣದಿಂದಲೇ ನನ್ನ ತಂದೆ ದಾವಾ ಐಟಂ ನಂ.7 ರಿಂದ 9 ರ ಸ್ವತುತಗಳನ್ನು 4 ನೇ ಪ್ರತಿವಾದಿಗೆ ದಿನಾಂಕ 10/04/2008 ರಂದು ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ದಾಖಲೆಯನ್ನು 4 ನೇ ಪ್ರತಿವಾದಿ ನನ್ನ ತಂದೆಯ ಮೇಲೆ ಒತ್ತಡ ಹೇರಿ ಮಾಡಿಸಿಕೊಂಡಿರುತ್ತಾರೆ, ನನ್ನ ತಂದೆ ಸದರಿ ದಾನಪತ್ರವನ್ನು ಸ್ವಇಚ್ಛೆಯಿಂದ ಮಾಡಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾನಪತ್ರವಾಗುವ ಸಮಯದಲ್ಲಿ ನಾನು ಮತ್ತು 4 ನೇ ಪ್ರತಿವಾದಿ ಒಟ್ಟಿಗೆ ಇದ್ದೇವಾ ಎಂದರೆ ಸಾಕ್ಷಿ ಇಲ್ಲ ನಾನು ಆ ಸಮಯದಲ್ಲಿ ಬೆಂಗಳೂರಿನಲ್ಲಿದ್ದೆ, ದಾನಪತ್ರದ ವಿಚಾರ ನನಗೆ ಗೊತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ಬೆಂಗಳೂರಿನಲ್ಲಿ ನಾನು ಖಾಸಗಿ ಉದ್ಯೋಗ ಮಾಡಿಕೊಂಡಿದ್ದೇನು. ಆ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ವಾಸದ ಬಗ್ಗೆ ಕರಾರುಪತ್ರವನ್ನು ಹಾಜರುಪಡಿಸಬಹುದು ಎಂದು ನುಡಿದಿರುತ್ತಾರೆ. 2019 ರಲ್ಲಿ ನನ್ನ ತಂದೆಗೆ ತೀವ್ರ ಅನಾರೋಗ್ಯ ಉಂಟಾದಾಗ ಬೆಂಗಳೂರಿನಿಂದ ಪಂಚನಹಳ್ಳಿಗೆ ಬಂದಿರುತ್ತೇನೆ. ದಾವಾ ಐಟಂ ನಂ.7 ರಿಂದ 9 ರ ಆಸ್ತಿಗಳಲ್ಲಿ ಹಿಸ್ಸೆ ಪಡೆಯಲು ನನ್ನ ಹಕ್ಕಿಲ್ಲ ಎಂದರೆ ಸರಿಯಲ್ಲ. ನಿಪಿ-18 ರ ದಾನಪತ್ರದಲ್ಲಿ 4 ನೇ ಪ್ರತಿವಾದಿ ನನ್ನ ತಂದೆಯ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದ ಬಗ್ಗೆ ಉಲ್ಲೇಖ ಇದ್ದು, ಅದರಂತೆ ದಾನಪತ್ರ ಆಗಿದೆ ಎಂದರೆ ಸಾಕ್ಷಿ 4 ನೇ ಪ್ರತಿವಾದಿ ನನ್ನ ತಂದೆಯನ್ನು ನೋಡಿಕೊಳ್ಳುತ್ತಿದ್ದರು, ಆದರೆ ದಾನಪತ್ರವಾದ ನಂತರ ನನ್ನ ತಂದೆಯನ್ನು ಕೈಬಿಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಹಾಗಾದರೆ ನಾನು ದಾನಪತ್ರವಾಗುವಾಗ ನಾನು ಹಾಜರಿದ್ದೆ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಬೆಂಗಳೂರಿನಲ್ಲಿದ್ದೆ ಎಂದು ನುಡಿದಿರುತ್ತಾರೆ. ದಾನಪತ್ರವಾಗಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಆಸ್ತಿಗಳನ್ನು ಲಪಟಾಯಿಸುವ ಸಲುವಾಗಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು 3 ಮತ್ತು 4 ನೇ ಪ್ರತಿವಾದಿಗಳ ಸ್ವಯಾರ್ಜಿತ ಆಸ್ತಿಗಳಾಗಿದ್ದು, ಅವು

ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಅಲ್ಲದೆ ಇದ್ದರೂ ಸಹ ಕೆಲವು ಆಸ್ತಿಗಳನ್ನು ಕೈ ಬಿಟ್ಟು ಪ್ರಸ್ತುತ ದಾವೆಯನ್ನು ಅಕ್ರಮ ಲಾಭಕ್ಕಾಗಿ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪನ ಹೆಸರಿನಲ್ಲಿದ್ದ ಆಸ್ತಿಗಳು ಅವರ ಮರಣದ ನಂತರ ನನ್ನ ಚಿಕ್ಕಮ್ಮ ಗೌರಮ್ಮರವರ ಹೆಸರಿಗೆ ಖಾತೆ ಬಂದಿರುವ ವಿಚಾರ ನನಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿದಿರುತ್ತಾರೆ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲುಃ 8 ಮತ್ತು 9ನೇ ಪ್ರತಿವಾದಿಗಳ ಪರಃ ಶ್ರೀ ಎಂ ಒ ಜೆ ವಕೀಲರಿಂದಃ

ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.